**OS No**: 102/2022 **P.W**: 1

**ದಿನಾಂಕ : 10.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು 4 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ. ವೈ.ಬಿ.ಎಸ್. ರವರಿಂದ :-**

1ನೇ ಪ್ರತಿವಾದಿ ನನ್ನ ದೊಡ್ಡಮ್ಮನ ಮಗಳು ಇರುತ್ತಾಳೆ. ಈ ದಿನ ಅವಳು ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಓ.ಎಸ್.ನಂ. 64/2022 ರಂತೆ ಹಿಸ್ಸೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಓ.ಎಸ್.ನಂ. 64/2022 ರಲ್ಲಿ ನನಗೆ ಸಮನ್ಸ್ ಜಾರಿಯಾಗಿದೆ ಎಂದರೆ ಸರಿ. ಗುಳ್ಳದಪುರ ಗ್ರಾಮದ ಸರ್ವೆ ನಂ. 4/2 ರಲ್ಲಿ ಒಟ್ಟು 7 ಎಕರೆ 32 ಗುಂಟೆ ಜಮೀನು ಇದೆ. ನನ್ನ ತಂದೆಯ ಹೆಸರು ಚಲುವೇಗೌಡ. ನಾನು ಚಲುವೇಗೌಡ ರವರ ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ಆಧಾರ್ ಕಾರ್ಡ್ ಅನ್ನು ಹಾಜರುಪಡಿಸಿರುವುದಿಲ್ಲ. 2ನೇ ವಾದಿ ನನ್ನ ದೊಡ್ಡಮ್ಮನ ಮಗಳು ಇರುತ್ತಾಳೆ. 4ನೇ ಪ್ರತಿವಾದಿ ನನ್ನ ಅಣ್ಣ. 6ನೇ ಪ್ರತಿವಾದಿ ನನಗೆ ಅತ್ತಿಗೆಯಾಗಬೇಕು. ನನ್ನ ದೊಡ್ಡಪ್ಪ ಜವರೇಗೌಡರವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಹೆಸರಿಗೆ ವಿಲ್ ಮಾಡಿಕೊಟ್ಟಿರುತ್ತಾರೆ ಆದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಿನಾಂಕ : 08.09.2005 ರಂದು ಬಾಂಡ್ ತಂದಿದ್ದು ನಂತರ ವಿಲ್ ದಿನಾಂಕ : 16.09.2005 ರಂದು ನೋಂದಣಿಯಾಗಿರುತ್ತದೆ. ವಿಲ್‌ಗೆ ಒಕ್ಕಣಿಕೆಯನ್ನು ದಿನಾಂಕ : 16.09.2005 ರಂದು ನೀಡಲಾಗಿರುತ್ತದೆ.

ಜವರೇಗೌಡರವರು ದಿನಾಂಕ : 20.10.2005 ರಂದು 6 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿ ಎಂದು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಾವಾ ಆಸ್ತಿಗೆ ಸಂಬಂಧಪಡುವುದಿಲ್ಲ ಎಂದು ನುಡಿಯುತ್ತಾರೆ. ಜವರೇಗೌಡರವರು ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ನೆನಪಿಲ್ಲ. ಯಾವ ದಿನಾಂಕದಂದು ಜವರೇಗೌಡರು ತೀರಿಕೊಂಡಿರುತ್ತಾರೆಂದು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ

ಹೇಳಿರುತ್ತೇನೆ. ವಿಲ್ ಮೇಲೆ ನಾನು ಇನ್ನು ಖಾತೆ ಮಾಡಿಸಿಕೊಂಡಿಲ್ಲ. ವಿಲ್‌ಗೆ ಬೊಮ್ಮೇಗೌಡರ ಮಗ ರಾಜೇಗೌಡ, 2ನೇ ಪುಟ್ಟೇಗೌಡನ ಮಗ ಕೃಷ್ಣೇಗೌಡ , ನಂಜೇಗೌಡರ ಮಗ ಪರಶುರಾಮ ರವರು ಸಾಕ್ಷಿ ಎಂದು ಸಹಿ ಹಾಕಿರುತ್ತಾರೆ. ವಿಲ್ ನೋಂದಣಿ ಮಾಡುವ ಸಮಯಕ್ಕೆ ಈ ಯಾವುದೇ ಸಾಕ್ಷಿದಾರರು ಹಾಜರು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಬಾಷೆ ಸ್ವಲ್ಪ ಮಟ್ಟಿಗೆ ಓದಲು ಬರುತ್ತದೆ. ನಾನು ಹೇಳುವಂತೆ ರಾಜೇಗೌಡ, ಕೃಷ್ಣೇಗೌಡ ಮತ್ತು ಪರಶುರಾಮ್ ರವರು ನೋಂದಣಿ ಸಮಯಕ್ಕೆ ಹಾಜರಿರಲಿಲ್ಲ, ನಿಪಿ 16 ಕ್ಕೆ ಎನ್. ಕುಮಾರೇಶ ಬಿನ್ ನಟರಾಜ, ಹೆಚ್.ಜಿ. ನಾಗೇಶ ಬಿನ್ ಗೋಪಾಲ ಕೃಷ್ಣ ಎನ್ನುವವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 16 ರಲ್ಲಿ ನಾನು ಜವರೇಗೌಡರವರ ಸಾಕು ಮಗ ಎಂದು ಹೇಳಿದ್ದೇನೆ ಎಂದರೆ ಸರಿ.

ನಾನು ಜವರೇಗೌಡರವರ ಸಾಕು ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ದಿನಾಂಕ : 16.09.2005 ರಂದು ನಿಪಿ 16 ನ್ನು ತಯಾರಿಸುವ ಸಮಯಕ್ಕೆ ನಾನು ಇದ್ದೆ, ಅದನ್ನು ಜವರೇಗೌಡರವರೇ ಬರೆಸಿರುತ್ತಾರೆ. 3 ನೇ ಪ್ರತಿವಾದಿ ಸಾಕಮ್ಮ ನನ್ನ ತಾಯಿ. ನನ್ನ ತಂದೆ ಚಲುವೇಗೌಡ ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ಅವರು ತೀರಿಕೊಂಡು ಈಗ 40 ವರ್ಷಗಳಾಗಿದೆ. ಈಗ್ಗೆ 2 ವರ್ಷಗಳ ಹಿಂದೆ ಮನೆಯಲ್ಲಿ ದೂಳು ತೆಗೆಯುವ ಸಮಯಕ್ಕೆ ಕಬ್ಬಿಣದ ಪೆಟ್ಟಿಗೆಯಲ್ಲಿ ನಿಪಿ 16 ರ ದಾಖಲಾತಿ ಸಿಕ್ಕಿರುತ್ತದೆ. ಜವರೇಗೌಡ ಮತ್ತು ಸಾಕಮ್ಮ ರ ಜಂಟಿ ಖಾತೆಯಲ್ಲಿ ಸರ್ವೆ ನಂ. 4/2 ಕ್ಷೇತ್ರ 7 ಎಕರೆ 32 ಗುಂಟೆ ಆಸ್ತಿ ಇತ್ತು ಎಂದರೆ ಸರಿ. ಜವರೇಗೌಡ ಮತ್ತು 3 ನೇ ಪ್ರತಿವಾದಿ ಯಾವುದೇ ವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಪತ್ರ ಮಾಡಿಕೊಂಡಿಲ್ಲ ಆದರೆ ಅವರಿಬ್ಬರು ಬೇರೆ ಬೇರೆಯಾಗಿ ಹಂಚಿಕೆ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಜವರೇಗೌಡ ಮತ್ತು 3 ನೇ ಪ್ರತಿವಾದಿ ಆಸ್ತಿಯನ್ನು ಹಂಚಿಕೆ ಮಾಡಿಕೊಂಡ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

ಈಗ 1ನೇ ಪ್ರತಿವಾದಿ ಹೆಸರಿಗೆ ಎಷ್ಟು ಕ್ಷೇತ್ರ ಬಂದಿದೆ ಎಂದು ತಿಳಿದುಕೊಂಡಿರುತ್ತೀರ ಎಂದರೆ ಸಾಕ್ಷಿ 6 ಎಕರೆ 28 ಗುಂಟೆ ಆಸ್ತಿ 1 ಮತ್ತು 3ನೇ ಪ್ರತಿವಾದಿಯ ಜಂಟಿ ಖಾತೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯು 6ನೇ ಪ್ರತಿವಾದಿ ಹೆಸರಿಗೆ 1 ಎಕರೆ 28 ಗುಂಟೆ ಸಂಬಂಧಿಸಿದಂತೆ ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. 2005 ನೇ ಇಸವಿಯಲ್ಲಿ ಜವರೇಗೌಡರವರು 1 ಎಕರೆ ಜಮೀನನ್ನು 6ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದಕ್ಕೂ ಮೊದಲೇ ನನಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ ಅನ್ನು ದಿನಾಂಕ : 16.09.2005 ರಂದು ಮಾಡಿಕೊಟ್ಟಿರುತ್ತಾರೆ. ವಿಲ್‌ನ ಜೊತೆಗೆ ಬೇರೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ, ಅವು ಯಾವ ದಾಖಲಾತಿಗಳು ಎಂದು ನನಗೆ ಹೇಳಲು ಬರುವುದಿಲ್ಲ.

ಚಲುವೇಗೌಡರಿಗೆ ಒಟ್ಟು 7 ಜನ ಮಕ್ಕಳಿರುತ್ತಾರೆ. ಚಲುವೇಗೌಡರ ಎಲ್ಲಾ ಮಕ್ಕಳನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೀರ ಎಂದರೆ ಸಾಕ್ಷಿ ಕೇವಲ 3 ಜನರನ್ನು ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಓ.ಎಸ್. 64/2022 ನ್ನು ದಾಖಲಿಸಿದ ನಂತರ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಮೊದಲು ನಾನೇ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸ್ವಾಧೀನದಲ್ಲಿ ನಾನೇ ಇರುತ್ತೇನೆ. ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ಯಾವುದೇ ತೊಂದರೆ ಕೊಡದೇ ಇದ್ದರು ಸಹಾ 1ನೇ ಪ್ರತಿವಾದಿ ಓ.ಎಸ್.ನಂ. 64/2022 ದಾವೆಯನ್ನು ಸಲ್ಲಿಸಿದ ನಂತರ ನನಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರು ಸಹಾ ಪ್ರತಿವಾದಿಯರ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಜವರೇಗೌಡ ತೀರಿಕೊಂಡಾಗ ಅವರಿಗೆ ಸುಮಾರು 65 - 70 ವರ್ಷ ವಯಸ್ಸಾಗಿತ್ತು. ಜವರೇಗೌಡರವರು ಆರೋಗ್ಯವಾಗಿಯೇ ಇದ್ದರು. ಜವರೇಗೌಡರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 16 ನ್ನು ಮಾಡುವ ಸಮಯಕ್ಕೆ ಜವರೇಗೌಡರವರ ಆರೋಗ್ಯ ಸರಿಯಾಗಿತ್ತು ಎಂದು ತೋರಿಸಲು ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ.

ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲಿಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರು
ಹೊಳೆನರಸೀಪುರ.